# ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ

## ಸಿ. ಸಿ. ನಂಃ 193/2020

ಪಿ.ಡಬ್ಲ್ಯೂ- 3
ಸಿ.ಡಬ್ಲೂ- 14

| | | |
|---|---|---|
| ಹೆಸರು | ಃ- | ಷರೀಪ ಅಬ್ಬಿಗೇರಿ |
| ತಂದೆ / ಗಂಡನ ಹೆಸರು | ಃ- | ಶಿವಪ್ಪ |
| ವಯಾ | ಃ- | 42 ವರ್ಷ |
| ಉದ್ಯೋಗ | ಃ- | ಒಕ್ಕಲುತನ |
| ವಾಸಸ್ಥಳ | ಃ- | ಅಣ್ಣಿಗೇರಿ |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 09-06-2025 |

***ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ***

1) ಆರೋಪಿತನ ಪರಿಚಯವಿಲ್ಲ. ಚಾಸಾ-1 ಮತ್ತು ಚಾಸಾ-12 ನನ್ನ ತಮ್ಮನಾಗಬೇಕು. ಚಾಸಾ-3 ರವರ ಪರಿಚಯವಿಲ್ಲ. ಚಾಸಾ-15 ರವರ ಪರಿಚಯವಿಲ್ಲ.

2) ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲಾ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು.)*

ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ -

1) ದಿನಾಂಕ 14-01-2019 ರಂದು ನನ್ನ ತಮ್ಮನಾದ ದುರ್ಗಪ್ಪ ಇತನು ತನ್ನ ಸ್ನೇಹಿತರಾದ ಶಿವರಾಜಕುಮಾರ ಹಾಗೂ ಅಶೋಕ ರವರ ಸಂಗಡ ತಮ್ಮ ದ್ವಿಚಕ್ರ ವಾಹನದ ಮೇಲೆ

ಗದಗ ಕಡೆ ಒಂದೇ ಮೋಟರ ಸೈಕಲ್ ಮೇಲೆ ಹೊರಟಿದ್ದು ನ್ಯಾಯಾಲಯದ ಎದುರು ಇದ್ದ 1 ನೇ ಆರೋಪಿತನು ಬಸ್ಸನ್ನು ಅವರ ದ್ವಿಚಕ್ರ ವಾಹನಕ್ಕೆ ಗುದ್ದಿ ಅಪಘಾತ ಪಡಿಸಿದ್ದು ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ದ್ವಿಚಕ್ರ ವಾಹನವನ್ನು ಶಿವಕುಮಾರ ಕಾಳೆ ರವರು ಚಲಾಯಿಸುತ್ತಿದ್ದು, ಅಶೋಕ ಹಾಗೂ ದುರ್ಗಪ್ಪ ಇವರು ಹಿಂಬದಿ ಸವಾರರಾಗಿದ್ದು, ಆರೋಪಿತನು ಬಸ್ಸು ಗುದ್ದಿದ್ದರಿಂದ ಅಪಘಾತದಲ್ಲಿ ಅಶೋಕ ರವರಿಗೆ ಬಾರಿ ಪ್ರಮಾಣದ ಗಾಯವಾಗಿದ್ದು, ದುರ್ಗಪ್ಪ ಶಿವಪ್ಪ ಅಬ್ಬಿಗೇರಿ ಹಾಗೂ ಶಿವಕುಮಾರ ಕಾಳೆ ರವರು ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತವು ಆರೋಪಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಅಂದರೆ ಸರಿಯಲ್ಲ.

2) ಸದರಿ ಘಟನೆಯ ಬಗ್ಗೆ ನಾನು ದಿನಾಂಕ 15-01-2020 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು " ಮೇಲ್ಕಂಡ ವಿಳಾಸದಲ್ಲಿ…... ರಿಂದ……….ನೀಡಿದ್ದು ಇರುತ್ತದೆ " ಸದರಿ ಹೇಳಿಕೆ ಭಾಗವನ್ನು ನಿ.ಪಿ.**14** ಎಂದು ಗುರುತಿಸಲಾಯಿತು.

3) ಪ್ರಕರಣದ ಬಗ್ಗೆ ನನಗೆ ಮಾಹಿತಿ ಇದ್ದರು ಸಹ, ನಾನು ಕಣ್ಣಾರೇ ಅಪಘಾತವನ್ನು ನೋಡಿದರು ಸಹ ಇಲ್ಲಾ ಹಾಗೂ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

*ಪಾಟೀಸವಾಲು ಆರೋಪಿ ಪರ ಃ ಶ್ರೀ ಎಂ ಎಸ್ ಹೆಚ್ ವಕೀಲರಿಂದ ಃ* -

ಪಾಟೀಸವಾಲು ಇಲ್ಲಾ ಎಂದು ನಿವೇದಿಸಿಕೊಂಡ ಕಾರಣ ಪಾಟೀಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**
**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**